2017 ಕ.ತೀ.ವ. 1859

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ

**ಶ್ರೀ ರಾಮನಗೌಡ –ವಿರುದ್ಧ– ಕಮಿಷನರ್ ಮತ್ತು ಅಪೀಲು ಪ್ರಾಧಿಕಾರ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಇತರರು***

**ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.**

**ಅವಶ್ಯಕ ವಸ್ತುಗಳ ಕಾಯಿದೆ ಕಲಂ 3 ಹಾಗೂ 7 ರಡಿಯಲ್ಲಿ ತಮ್ಮ ವಿರುದ್ಧ ದಾಖಲಾದ ಕ್ರಿಮಿನಲ್ ಮೊಕದ್ದಮೆಯನ್ನು ಆಧರಿಸಿ ತಮ್ಮ ಪರವಾನಗಿಯನ್ನು ರದ್ದುಗೊಳಿಸಿದ ಕ್ರಮವನ್ನು ಪ್ರಶ್ನಿಸಿ ಅರ್ಜಿದಾರರಿಂದ ಸದರಿ ರಿಟ್ ಅರ್ಜಿ ಸಲ್ಲಿಕೆ.**

**ಕ್ರಿಮಿನಲ್ ಮೊಕದ್ದಮೆಯನ್ನು ಅರ್ಜಿದಾರರ ವಿರುದ್ಧ ಹೂಡಲಾಗಿದ್ದು, ಮೊಕದ್ದಮೆಯ ಫಲಿತಾಂಶಕ್ಕೆ ಕಾಯದೆ ಸರ್ಕಾರಕ್ಕೆ ಪರವಾನಗಿಯನ್ನು ರದ್ದುಗೊಳಿಸುವ ಹಕ್ಕಿರುತ್ತದೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.**

ಅರ್ಜಿದಾರರ ಪರವಾಗಿ : ಶ್ರೀ ಎಸ್.ಎಂ. ಕಲ್ವಾಡ್, ವಕೀಲರು ;
1 ರಿಂದ 3ರವರೆಗಿನ ಪ್ರತ್ಯರ್ಜಿದಾರರ ಪರವಾಗಿ : ಶ್ರೀಮತಿ ಕೆ. ವಿದ್ಯಾವತಿ, ಎಜಿಎ,
4ನೇ ಪ್ರತ್ಯರ್ಜಿದಾರರ ಪರವಾಗಿ : ಶ್ರೀ ಸಚಿನ್ ಎಸ್. ದೊಡ್ಡಮನಿ, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ:**

ಅರ್ಜಿದಾರನು, 1993 ರಿಂದ ಬಳ್ಳಾರಿ ತಾಲ್ಲೂಕಿನ ಹಿರೇಹಡಗಲಿ ಗ್ರಾಮದಲ್ಲಿ ನ್ಯಾಯಬೆಲೆ ಅಂಗಡಿಯನ್ನು ನಡೆಸುತ್ತಿದ್ದು, ಅದಕ್ಕೆ ಸರ್ಕಾರದಿಂದ ಪರವಾನಗಿಯನ್ನು

*ರಿಟ್ ಅರ್ಜಿ ಸಂಖ್ಯೆ: 101666/2016 (ಜಿಎಂ–ಇಸಿ), ದಿನಾಂಕ: 15ನೇ ಮಾರ್ಚ್, 2017.

ನೀಡಲಾಗಿತ್ತು. ಯಾವುದೇ ಕಾನೂನುಬಾಹಿರ ಕೆಲಸ ಮಾಡಿರದಿದ್ದರೂ, ಅತ್ಯಾವಶ್ಯಕ ವಸ್ತುಗಳ ಅಧಿನಿಯಮ, 1955ರ 3 ಮತ್ತು 7ನೇ ಪ್ರಕರಣಗಳಡಿ ಶಿಕ್ಷಾರ್ಹ ಅಪರಾಧಗಳಿಗಾಗಿ ಮೋಕಾ (MOKA) ಪೋಲೀಸರಿಂದ ಅಪರಾಧ ಸಂಖ್ಯೆ:9/ 2014ರಲ್ಲಿ ಅರ್ಜಿದಾರನ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ. ಅರ್ಜಿದಾರನ ವಿರುದ್ಧ ಪ್ರಕರಣ ದಾಖಲಾದ ದೃಷ್ಟಿಯಿಂದ, ಪ್ರತ್ಯರ್ಜಿದಾರರು ಅವನಿಗೆ ಅಹವಾಲು ಹೇಳಿಕೊಳ್ಳಲು ಯಾವುದೇ ಅವಕಾಶ ನೀಡದೆ ಪರವಾನಗಿಯನ್ನು ರದ್ದುಗೊಳಿಸಿರುತ್ತಾರೆ ಎಂದು ಅರ್ಜಿದಾರನ ಪರ ಹಾಜರಾದ ಮಾನ್ಯ ವಕೀಲರು ನಿವೇದಿಸಿರುತ್ತಾರೆ. ಅವರು ಮುಂದುವರೆದು, ಅದೇ ರೀತಿಯ ಪ್ರಕರಣದಲ್ಲಿ ಈರಮ್ಮ ಎಂಬಾಕೆಯು ಎತ್ತಿನ ಗಾಡಿಯಲ್ಲಿ 3.5 ಕ್ವಿಂಟಾಲ್ ಅಕ್ಕಿಯನ್ನು ಅಕ್ರಮ ಸಾಗಣೆ ಮಾಡುತ್ತಿದ್ದು, ನ್ಯಾಯಬೆಲೆ ಅಂಗಡಿಯ ಮಾಲೀಕಳಾಗಿದ್ದ ಅವಳ ವಿರುದ್ಧ ಪ್ರಕರಣ ದಾಖಲಾಗಿತ್ತು ಹಾಗೂ ಮೊದಲಿಗೆ, ಎರಡನೇ ಪ್ರತ್ಯರ್ಜಿದಾರನಿಂದ ಪರವಾನಗಿಯನ್ನು ಅಮಾನತ್ತಿನಲ್ಲಿಡಲಾಗಿತ್ತು ಹಾಗೂ ಆ ನಂತರ, ಆಕೆಗೆ ಎಚ್ಚರಿಕೆ ನೀಡಿ ಹಾಗೂ ರೂ.25,000/– ದಂಡವನ್ನು ಸಹ ವಿಧಿಸಲಾಗಿತ್ತು. ಆದರೆ, ಸದ್ಯದ ಪ್ರಕರಣದಲ್ಲಿ ಸಹ ಅದೇ ಬಗೆಯ ಅಪರಾಧ ಪ್ರಕರಣ ದಾಖಲಾಗಿರುತ್ತದೆ. ಹೀಗಾಗಿ, ಪ್ರತ್ಯರ್ಜಿದಾರರ ಕ್ರಮವು ಸ್ವೇಚ್ಛೆಯದ್ದಾಗಿದೆ ಮತ್ತು ಅರ್ಜಿದಾರನಿಗೂ ಸಹ ಪರವಾನಗಿಯನ್ನು ರದ್ದುಗೊಳಿಸುವ ಬದಲಾಗಿ ದಂಡ ವಸೂಲಿ ಮಾಡತಕ್ಕದ್ದಾಗಿರುತ್ತದೆ ಎಂದು ನಿವೇದಿಸಿರುತ್ತಾರೆ.

2. ಅರ್ಜಿದಾರನು, 400 ಲೀಟರ್ ಸೀಮೆಎಣ್ಣೆಯನ್ನು ಅಕ್ರಮವಾಗಿ ಸಾಗಣೆ ಮಾಡಿದ ಕಾರಣ ಪ್ರತ್ಯರ್ಜಿದಾರರು ಅತ್ಯಾವಶ್ಯಕ ವಸ್ತುಗಳ ಅಧಿನಿಯಮದ 3 ಮತ್ತು 7ನೇ ಪ್ರಕರಣಗಳನ್ನು ಅನ್ವಯಿಸಿದ್ದಾರೆ ಎಂದು ಮಾನ್ಯ ಎಜಿಎ ರವರು ನಿವೇದಿಸಿರುತ್ತಾರೆ. ಹೀಗಾಗಿ, ಈ ರಿಟ್ ಅರ್ಜಿಯನ್ನು ವಜಾಗೊಳಿಸಲು ಆಕೆಯು ನ್ಯಾಯಾಲಯವನ್ನು ಕೋರಿದ್ದಾಳೆ.

3. ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ, ಅತ್ಯಾವಶ್ಯಕ ವಸ್ತುಗಳನ್ನು ಹಾಗೂ ಆಹಾರ ಧಾನ್ಯಗಳನ್ನು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ನೀಡಿ, ಕೊಳ್ಳುವ ಸ್ಥಿತಿಯಲ್ಲಿಲ್ಲದ ಜನರಿಗೆ, ಆ ಸರಕುಗಳಿಲ್ಲದೆ ತಮ್ಮ ಕುಟುಂಬದ ಅಗತ್ಯತೆ ಹಾಗೂ ವೆಚ್ಚಗಳನ್ನು ಭರಿಸಲಾಗದ ಜನರಿಗೆ

ಕಡಿಮೆ ದರದಲ್ಲಿ ಆಹಾರ ಧಾನ್ಯಗಳು ಮತ್ತು ಅತ್ಯಾವಶ್ಯಕ ವಸ್ತುಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ. ಆದ್ದರಿಂದ, ಸರ್ಕಾರದ ಪರವಾಗಿ ಬಡ ಜನರಿಗೆ ಎಲ್ಲಾ ವಸ್ತುಗಳನ್ನು ನೀಡಲು ನ್ಯಾಯಬೆಲೆ ಅಂಗಡಿಯನ್ನು ನಡೆಸಲು ಪರವಾನಗಿ ಹೊಂದಿರುವ ವ್ಯಕ್ತಿಗಳಿಗೆ ಆಹಾರ ಧಾನ್ಯಗಳು ಮತ್ತು ಅತ್ಯವಶ್ಯಕ ವಸ್ತುಗಳನ್ನು ಪೂರೈಕೆ ಮಾಡುವುದು ಪ್ರತ್ಯರ್ಜಿದಾರ–ಸರ್ಕಾರದ ಕರ್ತವ್ಯವಾಗಿದೆ. ಜೊತೆಗೆ, ಸದರಿ ಪ್ರಕ್ರಿಯೆಯಲ್ಲಿ ಅಂಥ ವ್ಯಕ್ತಿಗಳು ಎಸಗುವ ಯಾವುದೇ ಅಕ್ರಮವನ್ನು ಪತ್ತೆ ಮಾಡುವುದು ಸಹ ಸರ್ಕಾರದ ಕರ್ತವ್ಯವಾಗಿದೆ. ತದನುಸಾರವಾಗಿ, ಅಧಿನಿಯಮದ ಉಪಬಂಧಗಳಡಿ ಆಹಾರ ಧಾನ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ಮತ್ತು ವಿನಿಯಮಗಳನ್ನು ಮಾಡಲಾಗಿದೆ. ಸರ್ಕಾರದಿಂದ ಕಾಲಕಾಲಕ್ಕೆ ನೀಡಲಾದ ನಿರ್ದೇಶನಗಳಿಗೆ ಅನುಸಾರವಾಗಿ ಆಹಾರ ಧಾನ್ಯಗಳನ್ನು ವಿತರಿಸಲು ಪರವಾನಗಿಯನ್ನು ನೀಡಲಾಯಿತು. ಪರವಾನಗಿದಾರನ ಕಡೆಯಿಂದಾದ ವೈಫಲ್ಯಕ್ಕೆ ಹೆಚ್ಚಿನ ಸಂಖ್ಯೆಯ ಸಾರ್ವಜನಿಕರು ತಮ್ಮ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಸರ್ಕಾರವು ಪರವಾನಗಿದಾರನನ್ನು ಅದೇ ಕೆಲಸಕ್ಕಾಗಿ ನಿಯೋಜಿಸಿದೆ ಮತ್ತು ಪರವಾನಗಿದಾರನು ಪ್ರತ್ಯರ್ಜಿದಾರ ಸರ್ಕಾರದ ನಿರ್ದೇಶನಗಳಿಗೆ ಅನುಸಾರವಾಗಿ, ಸರ್ಕಾರದ ಪರವಾಗಿ ಕಾರ್ಯನಿರ್ವಹಿಸಬೇಕಾಗಿರುತ್ತದೆ ಮತ್ತು ನಿಯಮಗಳು ಹಾಗೂ ವಿನಿಯಮಗಳ ಅನುಸಾರವಾಗಿಯೂ ಸಹ ಕಾರ್ಯವಹಿಸಬೇಕಿರುತ್ತದೆ. ಪರವಾನಗಿದಾರನು, ಆಹಾರ ಧಾನ್ಯಗಳನ್ನು ಸಾಗಿಸುವ ಅಥವಾ ವಿತರಿಸುವ ಮೂಲಕ ಅಕ್ರಮ ಚಟುವಟಿಕೆಯನ್ನು ನಡೆಸಿದಾಗ, ಅದು ಕಾನೂನಿಗೆ ವಿರುದ್ಧವಾಗಿರುವುದರಿಂದ, ಪರವಾನಗಿದಾರನಿಗೆ, ನೀಡಲಾದ ಪರವಾನಗಿಯನ್ನು ರದ್ದುಪಡಿಸಬೇಕೆ? ಅಥವಾ ಮುಂದುವರೆಸಬೇಕೆ? ಎಂಬುದನ್ನು ರಾಜ್ಯ ಸರ್ಕಾರವು ನಿರ್ಧರಿಸಬೇಕಿರುತ್ತದೆ. ಅರ್ಜಿದಾರ/ಪರವಾನಗಿದಾರನು ತನ್ನ ಪರವಾನಗಿಯ ಮುಂದುವರಿಕೆಯನ್ನು ಕ್ಲೇಮು ಮಾಡಲು ಯಾವುದೇ ಮೂಲಭೂತ ಹಕ್ಕನ್ನು ಹೊಂದಿರುವುದಿಲ್ಲ ಮತ್ತು ಪರವಾನಗಿಯನ್ನು ಮುಂದುವರೆಸಬೇಕೆ? / ರದ್ದುಪಡಿಸಬೇಕೆ ಅಥವಾ ಬೇಡವೆ? ಎಂಬುದನ್ನು ನಿರ್ಧರಿಸುವುದು ರಾಜ್ಯ ಸರ್ಕಾರವಾಗಿದೆ. ಪರವಾನಗಿದಾರನು ಆಹಾರ ಧಾನ್ಯಗಳನ್ನು ಅಕ್ರಮವಾಗಿ ವಿತರಿಸುತ್ತಿರುವುದು ಕಂಡುಬಂದಾಗ ನಿಯಮಗಳು ಮತ್ತು ವಿನಿಯಮಗಳಿಗೆ ಅನುಸಾರವಾಗಿ ನ್ಯಾಯಬೆಲೆ ಅಂಗಡಿಯನ್ನು ನಡೆಸಲು ಅವನ ಪರವಾನಗಿಯನ್ನು ಮುಂದುವರೆಸುವುದಕ್ಕೆ ಅವನಿಗೆ ಯಾವುದೇ ಹಕ್ಕಿರುವುದಿಲ್ಲ.

4. ನಮ್ಮ ಮುಂದಿರುವ ಈ ಪ್ರಕರಣದಲ್ಲಿ, ಅಧಿನಿಯಮದ 3 ಮತ್ತು 7ನೇ ಪ್ರಕರಣಗಳಡಿ, ಅರ್ಜಿದಾರನು ಅಪರಾಧವನ್ನೆಸಗಿದ್ದು ಎಂದರೆ, ಸಾರ್ವಜನಿಕ ವಿತರಣೆಗೆಂದೇ ಮೀಸಲಿರಿಸಲಾದ 400 ಲೀ. ಸೀಮೆಎಣ್ಣೆಯನ್ನು ಅಕ್ರಮ ಸಾಗಣೆ ಮಾಡಿದ್ದಾನೆಂದು ಆಪಾದಿಸಿದ್ದು, ಅದನ್ನು ವಶಪಡಿಸಿಕೊಳ್ಳಲಾಗಿದೆಯೆಂದು ಅಪರಾಧ ಪ್ರಕರಣವು ದಾಖಲಾಗಿರುತ್ತದೆ. ದೂರುದಾರರು ಸರ್ಕಾರವಲ್ಲದೆ ಬೇರ್‍ಯಾರೂ ಅಲ್ಲ. ಪರವಾನಗಿಯನ್ನು ನೀಡಲು ಮತ್ತು ರದ್ದುಗೊಳಿಸಲು ಸರ್ಕಾರವು ಸಕ್ಷಮ ಪ್ರಾಧಿಕಾರವಾಗಿದೆ. ಪರವಾನಗಿದಾರನು, ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿ ನಡೆದುಕೊಂಡಿರುತ್ತಾನೆ. ತದನುಸಾರವಾಗಿ, ಅಪರಾಧ ಪ್ರಕರಣದ ಫಲಿತಾಂಶಕ್ಕೆ ಕಾಯದೆ, ಲೈಸೆನ್ಸ್ ರದ್ದುಪಡಿಸುವ ಅಧಿಕಾರ ಸರ್ಕಾರಕ್ಕಿದೆ. ಈ ಸಂದರ್ಭದಲ್ಲಿ, ಪ್ರತ್ಯರ್ಜಿದಾರರು ಹೊರಡಿಸಿದ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ನಮಗೆ ಯಾವುದೇ ಸಮರ್ಥನೀಯ ಕಾರಣ ಕಂಡುಬಂದಿಲ್ಲ.

5. ಈ ಸಂದರ್ಭದಲ್ಲಿ, ಅಂತಹುದೇ ಒಂದು ಪ್ರಕರಣದಲ್ಲಿ ಸರ್ಕಾರವು 25,000/– ರೂ. ಶುಲ್ಕ ವಿಧಿಸಿದ್ದು, ಮುಂದೆಂದೂ ಅಂಥ ಕೆಲಸ ಮಾಡುವುದಿಲ್ಲವೆಂದು ಮಾತು ತೆಗೆದುಕೊಂಡಿದೆ. 25,000/– ರೂ. ಶುಲ್ಕವನ್ನು ವಿಧಿಸುವಲ್ಲಿ ಪ್ರತ್ಯರ್ಜಿದಾರರು ಮಾಡಿರುವ ತಪ್ಪು ಭಾರತ ಸಂವಿಧಾನದ 14ನೇ ಅನುಚ್ಛೇದದ ವ್ಯಾಪ್ತಿಗೆ ಬರುವುದಿಲ್ಲ. ಅದು ಕಾನೂನಿಗೆ ವಿರುದ್ಧವಾಗಿದೆ. ಈ ಸನ್ನಿವೇಶದಲ್ಲಿ ಅರ್ಜಿಯನ್ನು ವಿಲೇ ಮಾಡಲಾಗಿದೆ. ಅರ್ಜಿದಾರನನ್ನು ಅಪರಾಧ ಪ್ರಕರಣದಿಂದ ಖುಲಾಸೆಗೊಳಿಸಿದಲ್ಲಿ, ಪರವಾನಗಿಯ ಮುಂದುವರಿಕೆ ಕೋರಿ ಅರ್ಜಿ ಸಲ್ಲಿಸುವುದಕ್ಕೆ ಅವನಿಗೆ ಅವಕಾಶ ನೀಡಲಾಗುತ್ತದೆ. ಅರ್ಜಿದಾರನು ಅಂಥ ಅರ್ಜಿಯನ್ನು ಸಲ್ಲಿಸಿದರೆ, ಕಾನೂನಿನ ಅನುಸಾರ ಅದನ್ನು ಪರಿಗಣಿಸುವುದು ಮತ್ತು ಸೂಕ್ತ ಆದೇಶವನ್ನು ಹೊರಡಿಸುವುದು ಪ್ರತ್ಯರ್ಜಿದಾರರಿಗೆ ಸೇರಿದೆ.

ಈ ಅಭಿಪ್ರಾಯೋಕ್ತಿಗಳೊಂದಿಗೆ, ಸದರಿ ರಿಟ್ ಅರ್ಜಿಯನ್ನು ವಿಲೇ ಮಾಡಲಾಗಿರುತ್ತದೆ.

---